**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ. 4187/2021

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

**ಸಾಕ್ಷಿಗೆ ದಿಃ 24.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ Y.K.Y ವಕೀಲರಿಂದಃ**

ನಾನು ಎಂ.ಎಸ್.ಸಿ ಕೊನೆಯ ವರ್ಷದ ವಿದ್ಯಾರ್ಥಿ ಆಗಿರುತ್ತದೆ. 2021 ರಲ್ಲಿನಾನು ಡಿಗ್ರಿಯ ವಿದ್ಯಾಭಾಸ ಮಾಡುತ್ತಿದ್ದೇ. ದಿಃ 17.02.2021 ರಂದು ನಾನು ಹೋಲದ ಹತ್ತಿರ ನನ್ನ ತಾಯಿಯೊಂದಿಗೆ ಕೆಲಸ ಮಾಡುತ್ತಿದ್ದೆ. ಸದರಿ ದಿನಾಂಕದಂದು ಪರೀಕ್ಷೆಯ ಹಿನ್ನಲೆಯಲ್ಲಿ ರಜೆ ನೀಡಿದ್ದರು ಕಾಲೇಜು ಇರಲಿಲ್ಲ. ದಿಃ 17.02.2021 ರಂದು ನಾನು ಕಾಲೇಜಿಗೆ ಹೋಗಿದ್ದು ಗಲಾಟೆ ಆದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲವೆಂದರೆ ಸರಿಯಲ್ಲ. ಡಿಗ್ರಿ ಪರೀಕ್ಷೆಗಳು ಮಾರ್ಚ ಕೊನೆಯ ವಾರ ಮತ್ತು ಏಪ್ರಿಲ್ ತಿಂಗಳಿನಲ್ಲಿರುತ್ತವೆ ಎಂದರೆ ಸರಿ.

ದಿಃ 18.02.2021 ರಂದು ಸಂಜೆ 5 ಗಂಟೆಯ ಸಮಯದಲ್ಲಿ ನಾನು ದೂರನ್ನು ನೀಡಿರುತ್ತೇನೆ. ಆದಿನ ನಾನು ಊರಿನಲ್ಲಿ ಇರಲಿಲ್ಲ ಮಾರನೇ ದಿನ ಬಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮೊದಲು ಹು.ದುರ್ಗ ಆಸ್ಪತ್ರೆಗೆ ತೋರಿಸಿದ್ದು ಅಲ್ಲಿಂದ ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಕರೆತಂದಿದ್ದು ಅಲ್ಲಿ ಆಗುವುದಿಲ್ಲ ಎಂದಿದ್ದಕ್ಕೆ ಎಸಿಗಿರಿ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ. ಹು.ದುರ್ಗ ಪ್ರಾ.ಆ. ಕೇಂದ್ರ ಕರೆದುಕೊಂಡು ಹೋಗಿರುತ್ತೇನೆ. ಚಾಸಾ 2 ಅವರನ್ನು ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ವೈದ್ಯರು ನೀಡಿರುವ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಹೆಸರು ಇರುವುದಿಲ್ಲವೆಂದರೆ ನನ್ನ ತಾಯಿ ಮತ್ತು ತಾಯಿಯ ಸಹೋದರರು ಸಹ ಬಂದಿದ್ದರು ಎಂದು ಹೇಳುತ್ತಾರೆ. ಚಾಸಾ 3 ನನ್ನ ಮಾವ ಆಗಿರುತ್ತಾರೆ. ಚಾಸಾ 3 ಅವರು ಕೊಡಿಹಳ್ಳಿಪಾಳ್ಯದವರು ಆಗಿರುತ್ತಾರೆ.

ಕೊಡಿಹಳ್ಳಿಪಾಳ್ಯದಿಂದ ನಮ್ಮ ಊರಿಗೆ 22 ಕೀ ಮೀ ಆಗುತ್ತದೆ. ಕೊಡಿಹಳ್ಳಿಪಾಳ್ಯದಿಂದ ಆರ್ ಬ್ಯಾಡರಹಳ್ಳಿಗೆ 35 ಕೀ ಮೀ ಆಗುತ್ತದೆ ಎಂದರೆ ಸರಿಯಲ್ಲ. ಕೊಡಿಹಳ್ಳಿಪಾಳ್ಯದಿಂದ ನಮ್ಮ ಊರಿಗೆ ಬರಲು 1 ರಿಂದ 1 ವರೆ ಗಂಟೆ ಬೇಕಾಗುತ್ತದೆ ಎಂದರೆ ಸರಿ. ದೂರಿನಲ್ಲಿ ಲಕ್ಷ್ಮಮ್ಮ ಅವರು ಚಾಸಾ 2 ಅವರನ್ನು ಆಸ್ಪತ್ರೆಗೆ ಕರೆದುಕೊಂಡು

ಹೋಗಿರುವುದಾಗಿ ಬರೆಯಲಾಗಿದೆ ಎಂದರೆ ಸಾಕ್ಷಿ ಅವರು ಸಹ ಬಂದಿದ್ದರು ಅವರು ನನ್ನ ಚಿಕ್ಕ ತಾತನ ಹೆಂಡತಿ ಆಗಿರುತ್ತಾರೆ. ಆಸ್ಪತ್ರೆಯಲ್ಲಿ 1 ವಾರ ಇದ್ದೇವು. ಗಾಯದ ಪ್ರಮಾಣ ಪತ್ರದ ಪ್ರಕಾರ ಅದೇ ದಿನ ಡಿಸ್ ಜಾರ್ಜ್ ಆಗಿರುತ್ತದೆ ಎಂದರೆ ಸರಿಯಲ್ಲ.

ಜಮೀನಿನ ಪಹಣಿಯನ್ನು ನೀಡಿರುತ್ತೇನೆ. ನಾನು ಯಾವುದೇ ಪಹಣಿ ನೀಡಿಲ್ಲ ನಮ್ಮ ಜಮೀನಿನ ಹತ್ತಿರ ಯಾವುದೇ ಗಲಾಟೆ ಆಗಿರುವುದಿಲ್ಲ ನಾನು ದೂರನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಯಾವುದೋ ದ್ವೇಷದಿಂದ ಎಂದು ದೂರಿನಲ್ಲಿ ಬರೆದಿದ್ದು ಏನು ದ್ವೇಷ ಇರುತ್ತದೆ ಎಂದರೆ ಸಾಕ್ಷಿ ಮೊದಲಿನಿಂದಲೂ ದ್ವೇಷ ಇತ್ತು ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಇರುವಂತಹ ಮು. ಮಾ. ಗಳಂತಹ ಸೀರೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಬಿದುರು ದೊಣ್ಣೆ ಆಗಿರುತ್ತದೆ. ಬಿದುರು ದೊಣ್ಣೆಗಳನ್ನು ಊರಿನಲ್ಲಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಬಿದುರು ದೊಣ್ಣೆಗಳು ಎಲ್ಲಾ ಕಡೆ ಸಿಗುತ್ತವೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 2 ಅವರು ಸೇರಿಕೊಂಡು ದೊಣ್ಣೆಯನ್ನು ಸೃಷ್ಟಿ ಮಾಡಿ ಸುಳ್ಳು ಕೇಸನ್ನು ಆರೋಪಿಯ ವಿರುದ್ದ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಗಲಾಟೆ ಆದ ದಿನ ಆರೋಪಿ ಸ್ಥಳದಲ್ಲಿ ಇರಲಿಲ್ಲ ಯಾವುದೇ ಗಲಾಟೆ ನಡೆದಿರುವುದಿಲ್ಲವೆಂದರೆ ಸರಿಯಲ್ಲ. ನಾನು ಕಾಲೇಜಿಗೆ ಹೋಗಿದ್ದು ನನ್ನ ತಾಯಿ ಮಾರನೇ ದಿನ ನನ್ನನ್ನು ಕರೆಯಿಸಿ ಆರೋಪಿಯ ವಿರುದ್ದ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಸ್ಥಳದಲ್ಲಿ ಇರಲಿಲ್ಲ ಆರೋಪಿ ಪ್ರಾಣ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಉದ್ದೇಶ ಪೂರ್ವಕವಾಗಿ ನಾವು ದ್ವೇಷದಿಂದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರವನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.